# ಸ್ವಾಮಿ ವಿವೇಕಾನಂದರ ಕರ್ಮಯೋಗ ! ವಿವೇಕಿ ಜನರ ತತ್ತ್ವಭೋಗ !

ಬ್ರಹ್ಮಚಾರಿ ಭೂದೇವಚೈತನ್ಯ

(ಹಿಂದಿನ ಸಂಚಿಕೆಯಿಂದ)

### ೬. ಕರ್ಮದಿಂದ ಯೋಗ್ಯತೆ ! ಯೋಗ್ಯನಲ್ಲಿ ಧನ್ಯತೆ ॥

೪೩. ಯೋಗ್ಯನಾಗುವವನಕ ಯಾರೂ
ಒಡೆಯನೆನಿಸಲಾರನು ।
ಮೃಗ್ಯ[೨೮] ದ್ರವ್ಯಜಾತ[೨೯] ನೂರು
ಪಡೆದೂ ಸುಖಿಸಲಾರನು ॥

೪೪. ಭೋಗ್ಯ ವಸ್ತು ಗಳಿಪ ತವಕ
ಭಜಿಸಿ[೩೦A] ಲೋಭಿ ನೊಂದನು ।
ಯೋಗ್ಯ ಶಕ್ತಿ ಮೂಡುವವನಕ
ಭಜಿಸಲಾರ ಒಂದನೂ ॥

೪೫. ಮೂಢ ಗ್ರಂಥಕೋಟಿಯನ್ನು
ಕೊಂಡುಕೊಳ್ಳಬಲ್ಲನು ।
ಚೂಡ ಹೊಗಲು ಬಿಟ್ಟುದನ್ನು[೩೦B]
ಕಂಡುಕೊಳ್ಳಬಲ್ಲನು! ॥

೪೬. ಭಾಗ್ಯ–ಬಾಗಿಲನ್ನು ತೆರೆವ
ಮರ್ಮ ಕೀಲಿ ಯೋಗ್ಯತೆ ।
ಯೋಗ್ಯಗುಣವ ನಿನ್ನಲೆರೆವ
ಕರ್ಮಕ್ಕಿಲ್ಲಿ ಮಾನ್ಯತೆ ॥

೪೭. ಕರ್ಮವೊಂದು ದಿವ್ಯ ಮೋಡಿ![೩೧] ।
ಯೋಗ್ಯ ಗುಣವ ತರುವುದು ।
ನರ್ಮ[೩೨] ಬಿಟ್ಟು ದುಡಿದು ನೋಡಿ
ಭಾಗ್ಯವರಸಿ ಬರುವುದು ॥

೪೮. ಸಲ್ಲುವಂಥ ಭಾಗ್ಯ ನಡೆಗೆ
ತಡೆಯು ಜಗದೊಳಿಲ್ಲವು ।
ಗೆಲ್ಲುವಂಥ ಯೋಗ್ಯನೆಡೆಗೆ
ನಡೆದು ಬರುವುದೆಲ್ಲವೂ ॥

### ೭. ನಿನ್ನ ಕೈಲಿದೆ ನಿನ್ನ ಭಾಗ್ಯ !

೪೯. ನಿನ್ನ  ಕುಂದು ಕೊರತೆಗೆಲ್ಲ
ಮನುಜ ! ನೀನೆ ಹೇತುವು ।
ಸೊನ್ನ[೩೩] ನೀತಿ ! ಮೊರೆಯು[೩೪]ಸಲ್ಲ
ಅನುಜ ! ಕರ್ಮ ಸೇತುವು ॥

೫೦. ಹಿಂದೆ ಎರೆದ ಕರ್ಮಜಲವು
ಇಂದಿನೆಸಳ ತಂದಿದೆ ।
ಮುಂದೆ ಬಿರಿವ ಬಾಳ ಚೆಲುವು
ಇಂದಿನೆಸಕದಂತಿದೆ[೩೫] ॥

೫೧. ನಿನ್ನ ಭಾವಿ ಬಾಳ್ವೆಗೆಲ್ಲ
ಮುಕ್ತ ಶಿಲ್ಪಿ ನೀನಲ್ಲೈ ।
ಖಿನ್ನನಾಗಿ ಲಾಭವಿಲ್ಲ
ಯುಕ್ತ[೩೬] ಶ್ರಮವ ನೀಡೆಲೈ॥

೫೨. ಇಷ್ಟಫಲಪ್ರಾಪ್ತಿ ಗಾಥೆ
ಕೃತಿಯ ರೀತಿಯಂತಿದೆ ।
ಶಿಷ್ಟ ಮಂತ್ರಮಾತೆ ಗೀತೆ
'ಕೃತಿ ಕೌಶಲ' ಎಂದಿದೆ ॥

೫೩. ಸಕ್ತಿಯಿಂದ[೩೭] ಶಕ್ತಿ ಪೋಲು !
ಕಡಿದು ಸಂಗ ದುಡಿಯೆಲೈ ।
ಯುಕ್ತಿಯಿಂದ ತ್ಯಜಿಸೆ ಮೇಲು ।
ಹಿಡಿದು ಮನವನಾಳೆಲೈ ॥

### ೮. ಸ್ವಾರ್ಥಶೂನ್ಯ ಕರ್ಮ ! ಜ್ಞಾನ ಪ್ರಾಪ್ತಿಯ ಮರ್ಮ ॥

೫೪. ಕರ್ಮವೆಂದರಲ್ಲಿ ಊಹ್ಯ
ಮನೋರಥವು[೩೮] ಹಿಂದಿದೆ ।
ಧರ್ಮ, ಕೀರ್ತಿ, ನಾಕ, ದ್ರವ್ಯ
ಮನೋಗತವು[೩೯] ಮುಂದಿದೆ ॥

೫೫. ಎಲ್ಲ ಆಸೆ ಪೂರ್ತಿಗಾಗಿ
ಲೋಕದಲ್ಲಿ ದುಡಿವರು ।
ಸಲ್ಲ ಆಸೆ ಎಂಬುದಾಗಿ
ಶೋಕದಲ್ಲೂ ನುಡಿಯರು! ।

೫೬. ಕೋಟಿಗೊಬ್ಬ ಧೀರ ಗೈವ
ಕೆಲಸಕಾಗಿ ಕೆಲಸವ ।
ದಾಟಿ ಸಂಗಸಗರಜಲವ[೪೦]
ಕಲಸಪ್ರಾಯನೆನಿಸುವ ॥

೫೭. ಆಸೆ ಬಿಟ್ಟರಿನ್ನು ಕರ್ಮ
ಫಲಿಸದೆಂದು ಅಳುವರು।
ಮೀಸೆ ಬಿಟ್ಟರೇನು, ಮರ್ಮ
ಕಲಿಯದಾಗಿ ಅಳಿವರು ॥

೫೮. ಸ್ವಲ್ಪ ತಾಳ್ಮೆ ! ಸ್ವಲ್ಪ ತ್ಯಾಗ ।
ಪ್ರೇಷ್ಠ[೪೧] ಬಿಟ್ಟು ದುಡಿವುದು ।
ಅಲ್ಪವೇಕೆ, ಬಹಳ ಬೇಗ
ಶ್ರೇಷ್ಠಫಲವೇ ದೊರೆವುದು ॥

೫೯. ಸ್ವಾರ್ಥಕಾಗಿ ಗೈದುದೆಲ್ಲ
ನರನ ಬಿಗಿವ ಬಂಧನ ।
ಸ್ವಾರ್ಥ ಬಿಟ್ಟು ಸಂದುದೆಲ್ಲ
ಪರಮ ಪದಕೆ ಸಾಧನ ॥

೬೦. ಸ್ವಾರ್ಥ ರೊಚ್ಚು ರೋಗದಂತೆ
ಕಾಡಿ ಸ್ವಾಸ್ಥ್ಯ ಕಳೆವುದು ।
ಸ್ವಾರ್ಥರಾಡಿ ಬಾಡಿದಂತೆ
ನಾಡಿ ಸ್ವಸ್ಥಗೊಳುವುದು ॥

೬೧. ಪ್ರೀತಿ, ಸತ್ಯ, ಸೇವೆಯೆಲ್ಲ
ಚರಮ ಗುರಿಯ ಮಂತ್ರವು ।
ನೀತಿ ಟೊಳ್ಳು ಶಾಸ್ತ್ರವಲ್ಲ
ಪರಮ ಶಕ್ತಿ–ತಂತ್ರವು ॥

೬೨. ಭಾವಿ ಲೆಕ್ಕ, ನರಕ–ನಾಕ–
ಚಿಂತೆ ಕೊಡವಿ ಚೆಲ್ಲುತ ।
ಸಾವಿಗಂತು ಸೊಪ್ಪುಹಾಕ–
–ದಂತೆ ಸಂಗ ಕೊಲ್ಲುತ ॥

೬೩. ಮಾತ್ರವೈದು ನಿಮಿಷ ಕೂಡ
ಸ್ವಾರ್ಥ ಮೀರಿ ದುಡಿವವ ।
ಪಾತ್ರ ಚಂಡ ಬಲಕೆ ನೋಡ ।
ಧರ್ಮವೀರನೆನಿಸುವ ॥

೬೪. ಫಲಕೆ ಗಂಟುಬಿದ್ದ ಸತ್ತ್ವ
ವ್ಯರ್ಥ ಹರಿವ ನೀರೊಲು ।
ಬಲಕೆ ತ್ಯಾಗ ಮೂಲ ತತ್ತ್ವ !
ಸ್ವಾರ್ಥ ಸೆರೆಯ ಬಾಗಿಲು ॥

೬೫. ವ್ಯರ್ಥ ಕರ್ಮಫಲಾಸಕ್ತಿ
ಭುಕ್ತಿ ಬಯಕೆ ಬಿಲದೊಲು ।
ಸ್ವಾರ್ಥದೋಷ[೪೨] ತಡೆವ ವ್ಯಕ್ತಿ
ಶಕ್ತಿ ಜಲದ ಮಡುವೊಲು ॥

೬೬. ಈ ಹತೋಟಿಯಿಂದ ಎದ್ದ
ಶೀಲಶಕ್ತಿ ಬೆಳೆವುದು ।
ಈಹಶೂನ್ಯ[೪೩] ಕ್ರಿಸ್ತ ಬುದ್ಧ–
–ರಂಥ ಬಲವ ತಳೆವುದು ॥

೬೭. ಗುಟ್ಟು ಇದನ್ನರಿಯದಂಥ
ಹೆಡ್ಡು ಮನುಜರೆಲ್ಲರೂ ।
ತೊಟ್ಟು ಭ್ರಮೆಯನಾಳುವಂಥ
ಗೊಡ್ಡು[೪೪] ತವಕವಂತರು ॥

೬೮. ಪೆದ್ದು ಕೂಡ ಜನರನಿಲ್ಲಿ
ಆಳಬಲ್ಲ ನಿಜದಲಿ ।
ಜಿದ್ದು ದೂಡಿ ಫಲಿತದಲ್ಲಿ
ತೋಳಬಲದಿ ದುಡಿಯಲಿ ॥

೬೯. ಗೆದ್ದು ಚಪಲ, ಧೀರನಾಗಿ
ಆಳ್ವ ತವಕ ತೊರೆಯಲಿ ।
ಎದ್ದು ರಾಜರಾಜನಾಗಿ
ಬಾಳ್ವನಾಗ  ಧರೆಯಲಿ ॥

೭೦. ಹೀನ ಲಾಭ ಲೆಕ್ಕವನ್ನು
ತೊರೆದು ನೆರವ ನೀಡೆಲೈ ।
ದೀನ ನಿನ್ನ ಗುಣಗಳನ್ನು
ಒರೆಯಲೆನ್ನಬೇಡವೈ ।

೭೧. ಇಂತು ಸ್ವಾರ್ಥ ಚಿಂತೆ ಬಿಟ್ಟು
ದಾನ ಧರ್ಮ ಮಾಡು ನೀ ।
ಎಂತು ದೇವ ಕೃಪೆಯನಿಟ್ಟು
ಸ್ಥಾನ ಕೊಡುವ ನೋಡು ನೀ ।

೭೨. ಒಳ್ಳೆ ಕಾರ್ಯ ಮಾಡುವಂದು
ನೀಗು ಫಲದ ಕಾತರ ।
ಗುಳ್ಳೆತನವ ಬಿಟ್ಟು ಬಂದು
ಆಗು ಮಹಾಸಾಗರ ॥

### ೯. ಕರ್ಮಯೋಗದ ಉತ್ತುಂಗ ಶಿಖರ

೭೩. ನಿಲ್ಲದಂತೆ ದುಡಿಯೆ ಕೊನೆಗೆ
ಶಾಂತಿ ಪಡೆವುದೆಲ್ಲಿದೆ ?
ಸಲ್ಲದಿಂಥ ಪ್ರಶ್ನೆ ನಿನಗೆ
ಭ್ರಾಂತಿ ನಿನ್ನ ಮುಸುಕಿದೆ ॥

೭೪. ಬಾಳಲೆರಡು ಬಗೆಯ ಗತ್ತು
ಭೋಗ, ಯೋಗ ಕಣಗಳು[೪೫]।
ಕಾಳಗಕ್ಕೆ ಕರ್ಮ ! ಮತ್ತು
ತ್ಯಾಗ, ಶಾಂತ–ವನಗಳು !

( ಪುಟ ೩೬ಕ್ಕೆ ಮುಂದುವರೆದಿದೆ )